ಮಂಜೂರಾಗುವುದಿಲ್ಲ. ಆದರೆ ಮಂಜೂರಾದಂತಹ ೧೦–೧೫ ದಿವಸಗಳಲ್ಲೇ ಅದನ್ನು ಕೈಬಿಟ್ಟಿದ್ದಾರೆ. ಈ ಕೆರೆಯು ಕಟ್ಟಲ್ಪಟ್ಟರೆ ಸುಮಾರು ೫೦೦ ಎಕರೆ ನೀರಾವರಿಯಾಗುತ್ತದೆ. ಆದರಲ್ಲೂ ಸುಮಾರು ೧೫೦ ಜನ ಹರಿಜನರು ಗೋಮಾಳದ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡಿದ್ದಾರೆ. ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಈಗಾಗಲೇ ಮಂಜೂರಾಗಿರತಕ್ಕಂತಹ ಕೆರೆಯನ್ನು ಈ ವರ್ಷವಾದರೂ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—೧೯೭೫–೭೬ನೇ ಸಾಲಿನಲ್ಲಿ ೩ ಕೆರೆಗಳನ್ನು ತೆಗೆದುಕೊಳ್ಳಬೇಕೆಂಬ ವಿಷಯವನ್ನು ಆಯವ್ಯಯದ ಪಟ್ಟಿಯಲ್ಲೇ ಸೇರಿಸಲಾಗಿತ್ತು. ರಾಮೇನಹಳ್ಳಿಯ ಕೆರೆಯ ಕೆಲಸವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಕೈಯಲ್ಲೇ ಶಿಲಾನ್ಯಾಸವನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳುವ ಪ್ರಕಾರ ಅದು ಬರೀ ಹರಿಜನ–ಗಿರಿಜನರಿಗೆ ಆಗಿರತಕ್ಕಂತಹದ್ದು. ನಾನೇ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೇನೆ. ಎರಡನೆ ಕೆರೆಯೂ ಕೂಡ ಹರಿಜನ–ಗಿರಿಜನರಿಗೇ ಅನುಕೂಲವಾಗುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಇಲಾಖೆಯ ಅಧಿಕಾರಿಗಳು ಕೊಟ್ಟಿರತಕ್ಕಂತಹ ವರದಿಯ ಮೇಲೆ ಹೇಳುವುದಾದರೆ, ೫೦೦ ಎಕರೆ ನೀರಾವರಿಯಾಗುವುದಿಲ್ಲ. ೭೯ ಎಕರೆ ಮಾತ್ರ ನೀರಾವರಿಯಾಗಬಹುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಅದರ ಸೆಟ್ಟು ಸರಿಯಾದ ಸ್ಥಳದಲ್ಲಿಲ್ಲ, ಮಾಡುವುದಕ್ಕಾಗುವುದಿಲ್ಲ ಎಂಬುದಾಗಿ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಸಾಧ್ಯವಾದರೆ, ಈ ಅಧಿವೇಶನ ಮುಗಿಯುವುದರೊಳಗಾಗಿ ನಾನೇ ಸ್ಥಳವನ್ನು ಪರಿಶೀಲನೆ ಮಾಡುತ್ತೇನೆ ಹರಿಜನ–ಗಿರಿಜನರಿಗೆ ಅನುಕೂಲವಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರಲ್ಲಿ ತಾಂತ್ರಿಕವಾಗಿ ಸೈಟ್ ಸೆಲೆಕ್ಷನ್‌ನಲ್ಲಿ ತೊಂದರೆಯಾಗಿದೆ. ನಾನೇ ಕಣ್ಣಾರೆ ನೋಡಿ, ಯಾವ ರೀತಿ ಸಹಾಯ ಮಾಡಬೇಕೆಂಬುದನ್ನು ನೋಡುತ್ತೇನೆ. ಕುಂದನ ಹೋಬಳಿ, ಸಂಪಲಕುಂಟೆ ಕೆರೆಯನ್ನೂ ಕೂಡ ಇನ್‌ಫೀಸಿಬಲ್ ಅಂತ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಅದನ್ನೂ ಕೂಡ ಪುನಃ ಪರಿಶೀಲನೆ ಮಾಡಿನೋಡುತ್ತೇನೆ.

ಬಂದೀಖಾನೆ ಇಲಾಖೆಯ ನೌಕರರುಗಳ ಕುಂದುಕೊರತೆಗಳು

೪೧೧. ಶ್ರೀ ಕೆ ವಸಂತ ಬಂಗೇರ (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಣ್ಣ ಉಳಿತಾಯ ಮತ್ತು ಕಾರಾಗೃಹಗಳ ರಾಜ್ಯ ಮಂತ್ರಿಯವರು ದಯವಿಟ್ಟು ಉತ್ತರಿಸುವರೆ ?

ಅ) ಜೈಲು ಇಲಾಖಾ ಸಿಬ್ಬಂದಿಯ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅವರ ಬೇಡಿಕೆಗಳ ನಿವಾರಣೆ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ.

ಶ್ರೀ ಪಿ. ವೀರಣ್ಣ(ಮಾನ್ಯ ಸಣ್ಣ ಉಳಿತಾಯ ಮತ್ತು ಕಾರಾಗೃಹಗಳ ರಾಜ್ಯಮಂತ್ರಿಯವರು).—

ಅ) ಬಂದಿವೆ.

ಆ) ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿವೆ,

ಶ್ರೀ ಕೆ. ವಸಂತ ಬಂಗೇರ.—ಕಳೆದ ಅಧಿವೇಶನದ ಸಂದರ್ಭದಲ್ಲಿ ಹಾಕಿದ ಪ್ರಶ್ನೆಗೆ ಇದೇ ಉತ್ತರ ಬಂದಿತ್ತು. ಪುನಃ ಒಂದು ವರ್ಷದ ನಂತರ ಪರಿಶೀಲನೆಯಲ್ಲಿದೆ ಎಂಬ ಉತ್ತರ ಕೊಟ್ಟಿದ್ದಾರೆ. ಇನ್ನು ಪರಿಶೀಲನೆಗೆ ಎಷ್ಟು ವರ್ಷ ಬೇಕು ? ಪರಿಶೀಲನೆ ಆದನಂತರ ಬೇಡಿಕೆಯನ್ನು ಕಾರ್ಯಗತ ಮಾಡಲು ಮತ್ತೆ ಎಷ್ಟು ವರ್ಷಗಳು ಬೇಕಾಗಬಹುದು ?

ಶ್ರೀ ವೀರಣ್ಣ.—ಕಾರಾಗೃಹದ ಸಿಬ್ಬಂದಿ ವರ್ಗದವರು ಇತ್ತೀಚೆಗೆ ಹತ್ತು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಅವುಗಳ ಬಗ್ಗೆ ಸಾಧ್ಯವಾದಷ್ಟು ಜಾಗ್ರತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಪರಿಶೀಲನೆ ಆದನಂತರ ಅವರ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ಹೇಳಿದರು. ಆದರೆ ಬೇಡಿಕೆ ಈಡೇರಿಕೆಗಾಗಿ ಮತ್ತು ಪರಿಶೀಲನೆಗಾಗಿ ಎಷ್ಟು ಸಮಯಬೇಕು ?

ಶ್ರೀ ವೀರಣ್ಣ.—ಈಗ ಪರಿಶೀಲನೆಯಲ್ಲೇನು ಇಲ್ಲ. ನಿಮ್ಮ ಉಪ ಪ್ರಶ್ನೆಗೆ ಹೇಳಿದೆ, ಸಾಧ್ಯವಾದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯುತ್ತಾ ಬಂತು. ಇನ್ನೂ ಐದಾರು ಪ್ರಶ್ನೆಗಳಿವೆ. ದಯವಿಟ್ಟು ಮಾನ್ಯ ಸದಸ್ಯರು ಸಹಕಾರ ಕೊಡಬೇಕು. ಪ್ರಶ್ನೆ ಹಾಕಿದ ಸದಸ್ಯರು ಮಾತ್ರ ಒಂದೆರಡು ಉಪ ಪ್ರಶ್ನೆಗಳನ್ನು ಕೇಳಿ.

ಪ್ರವಾಹ ವಿಮೋಚನಾ ಬದಲೀ ರಸ್ತೆಯಂ ನಿರ್ಮಾಣ ಕುರಿತಂ.

೪೪೧. ಶ್ರೀಮತಿ ಮನೋರಮಾ ಮಧ್ವಾರಾಜ್ (ಉಡುಪಿ).— ಈ ಕೆಳಕಂಡ ಪ್ರಶ್ನೆಗಳಿಗೆ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಅತಿ ಹೆಚ್ಚಿನ ಪ್ರವಾಹದ ಸಮಯದಲ್ಲಿ ಉಡುಪಿ ತಾಲ್ಲೂಕಿನ ಮಲ್ಪೆ ಉಡುಪಿ–ಕಾರ್ಕಳ ರಸ್ತೆ ಹಾಗೂ ಕಾರ್ಕಳ–ಪಲ್ಲಿ–ಬೆಲ್ಲೆ–ಮಣಿಪುರ ಉಡುಪಿ ರಸ್ತೆಯನ್ನು ಶಾರದ ಕಲ್ಯಾಣ ಮಂಟಪದ ಪಂಚಾಯಿತಿಯಿಂದ ಕೂಡಿಸುವ ಪ್ರವಾಹ ವಿಮೋಚನಾ ಬದಲೀ ರಸ್ತೆಯನ್ನು ಸೂಚಿಸಿದ ವಿಷಯವು ನಿಜವೇ ?

ಆ) ಕಾರ್ಕಳಕ್ಕೆ ತಪ್ಪಿಸಲ್ಪಟ್ಟಿದ್ದ ಬಸ್ ವ್ಯವಸ್ಥೆಯು, ೧೯೮೪–೧೯೮೫ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿದ್ದ ವಿಷಯವು ನಿಜವೇ ?

ಇ) ೧೯೮೬–೮೭ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಮೇಲ್ಕಂಡ ಕಾಮಗಾರಿಯು ಸೇರದಿರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಅ) ಹೌದು.

ಆ) 'ಅ'ನಲ್ಲಿ ಸೂಚಿಸಿರುವ ಕೆಲಸವು ೮೪–೮೫ರ ಆಯವ್ಯಯ ಪಟ್ಟಿಯಲ್ಲಿ ಸೇರಿತ್ತು.

ಇ) ಸಾಕಷ್ಟು ಹಣ ದೊರಕದೇ ಇರುವುದರಿಂದ.

ಶ್ರೀಮತಿ ಮನೋರಮಾ ಮಧ್ವಾರಾಜ್.—ಉಡುಪಿಯಲ್ಲಿ ಆಗಿಂದಾಗ್ಗೆ ನೆರೆ ಬಂದು ಸಾರ್ವಜನಿಕರಿಗೆ ಆಗುವಂತಹ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಬದಲಿ ರಸ್ತೆ ನಿರ್ಮಾಣ ಮಾಡಿ ಬಸ್ ವ್ಯವಸ್ಥೆ ಮಾಡಿಕೊಡುವ ಕಾರ್ಯ ಹೋದ ವರ್ಷವೇ ಆಗಬೇಕಾಗಿತ್ತು. ಅದು ೧೯೮೪–೮೫ನೇ ಸಾಲಿನ ಬಜೆಟ್ಟಿನಲ್ಲೇ ಸೇರಿತ್ತು. ಆದರೆ ಅದನ್ನು ಹಣದ ಅಭಾವದಿಂದ ೧೯೮೫–೮೬ನೇ ಸಾಲಿನ ಬಜೆಟ್ಟಿನಲ್ಲಿ ಕೈಬಿಟ್ಟಿದ್ದೇವೆಂದು ಹೇಳಿದ್ದೀರಿ. ಹಣದ ಅಭಾವ ಯಾವಾಗ ನೀಗುತ್ತದೆ ? ಆ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ನಿರ್ದಿಷ್ಟವಾಗಿ ಉತ್ತರಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಹಣದ ಪರಿಸ್ಥಿತಿ ಸುಧಾರಣೆ ಆದಮೇಲೆ ಆದ್ಯತೆ ಕೊಡುತ್ತೇವೆಂದೂ ಹೇಳಿದ್ದೇವೆ; ಆದರೆ ಭವಿಷ್ಯವನ್ನು ಹೇಳಲಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹಣದ ಅಭಾವ ಎಲ್ಲಾ ಕ್ಷೇತ್ರಗಳಲ್ಲೂ ಆಗಿದೆ.

ಅಧ್ಯಕ್ಷರು.—ನೀವು ಏತಕ್ಕೆ ವಕಾಲತ್ತು ವಹಿಸುತ್ತೀರಿ ? ಆದಷ್ಟು ಬೇಗ ಮಾಡುತ್ತಾರೆ.

ಶ್ರೀ ಧರ್ಮಸಿಂಗ್.—ಹಣದ ಅಭಾವ ಯಾವಾಗ ನೀಗುತ್ತದೆಂದು ಮಾನ್ಯ ದೇವೇಗೌಡರಿಂದ ನಾವು ನಿರ್ದಿಷ್ಟವಾಗಿ ಉತ್ತರ ಪಡೆಯಬಯಸುತ್ತೇವೆ. ಎಲ್ಲಾ ಕೆಡೆಯೂ ಹೀಗೆ ಆಗಿದೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಸಂಪನ್ಮೂಲಗಳನ್ನು ರೂಢಿಸುವುದಕ್ಕೆ ಏನೇನು ಸಲಹೆಗಳನ್ನು ಕೊಡುತ್ತಾರೆ ಅವುಗಳನ್ನು ತೆಗೆದುಕೊಂಡು ಸಂಪನ್ಮೂಲಗಳನ್ನು ಹೆಚ್ಚಿಸಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಈ ಹಣದ ಅಭಾವ ಎಲ್ಲ ಕ್ಷೇತ್ರದವರಿಗೂ ಅನ್ವಯವಾಗುತ್ತದೋ ? ಅಥವಾ ನಿರ್ದಿಷ್ಟವಾದ ಕ್ಷೇತ್ರಕ್ಕೆ ಮಾತ್ರ ಅನ್ವಯವಾಗುತ್ತದೋ ?